





ತಿಂಗಳಿಗೆ ಬರಬಹುದು.

'ಮೇ ಅಂತ್ಯದ ತನಕ ಮಳೆ ಬಾರದಿದ್ದರೂ ನಮ್ಮ ಅಡಿಕೆ ತೋಟಕ್ಕೆ ನೀರಿಗೆ ತೊಂದರೆ ಇಲ್ಲ' ಎನ್ನುತ್ತಾರೆ ಕೃಷಿಕ ಕೂರ್ಲುಗೆಯ ಗೋಪಾಲಕೃಷ್ಣ ಭಟ್.

ಭಾಗದ ಎಂಟು ಜನ ದೊಡ್ಡ ಕೃಷಿಕರು ಕಟ್ಟ ನಿರ್ಮಾಣದ ಹೆಚ್ಚಿನ ವೆಚ್ಚವನ್ನು ಭರಿಸಿದ್ದಾರೆ. ಉಳಿದ ಮಂದಿ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಸಹಾಯ ನೀಡಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಊರಿನ ಜನ ಕಟ್ಟದ ಅಗತ್ಯವನ್ನು ಮನಗಂಡಿದ್ದಾರೆ. 'ಕಟ್ಟ ನಮ್ಮದು, ಇದರಿಂದ ನಮ್ಮೂರು ಮಾತ್ರವಲ್ಲ ಸನಿಹದ ಊರಿನ ಜಲಮಟ್ಟವೂ ಏರುತ್ತದೆ' ಎಂದು ಹೆಮ್ಮೆಯಿಂದ ನುಡಿಯುತ್ತಿದ್ದಾರೆ.

ಕಿರು ತೊರೆಗೆ, ಹೊಳೆಗೆ ಹಿಂದಿನವರು ಆಯಕಟ್ಟಿನ ಸ್ಥಳಗಳಲ್ಲಿ ಪ್ರತಿವರ್ಷ ತಡೆಗಟ್ಟಗಳನ್ನು ಹಾಕುತ್ತಿದ್ದರು. ಮಳೆ ನಿಂತ ನಂತರವೂ ಫಲಾನುಭವಿಗಳೆಲ್ಲ ಸೇರಿ ಅಲ್ಲಲ್ಲಿ ಈ ರೀತಿಯು ನೀರಿನ ಕಟ್ಟಗಳನ್ನು ಹಾಕಿ ನೀರನ್ನು ತಡೆದಿಡುತ್ತಿದ್ದರು. ನೀರು ಶೇಖರಣೆಗೊಂಡು ಹೊಳೆ ಸನಿಹದ ಕೃಷಿಕರಿಗೆ ಸಮೃದ್ಧ ನೀರು ದೊರಕುತ್ತಿತ್ತು. ಹೊಳೆಯ ಒಳಭಾಗದ ಕೃಷಿಕರಿಗೂ ಮಣ್ಣಿನ ನೀರು ಹೀರುವಿಕೆ ಗುಣದಿಂದ ಕೆರೆ ಬಾವಿಗಳಲ್ಲಿ ನೀರಿನ ಮಟ್ಟ ಏರುತ್ತಿತ್ತು. ಇತ್ತೀಚಿನ ದಿನಗಳಲ್ಲಿ ಕೊಳವೆಬಾವಿ ಕೊರೆದು ಭೂಮಿಯ ಅಂತರ್ಜಲಕ್ಕೆ ಕನ್ನ ಹಾಕುವುದು ಸುಲಭವಾಯಿತು. ಇದರಿಂದ ಅಂತರ್ಜಲ ಬರಿದಾಗ ತೊಡಗಿದ್ದು ವಾಸ್ತವ. ಹೀಗಾಗಿ ಕಟ್ಟಗಳ ಮಹತ್ವ ಅರಿವಾಗತೊಡಗಿದೆ.

ಕಾಸರಗೋಡು ಜಿಲ್ಲೆಯಂತಹ ಪ್ರದೇಶಗಳಲ್ಲಿ ಕೊಳವೆಬಾವಿ ಸಂಪೂರ್ಣ ನಿಷೇಧಗೊಂಡಿದೆ. ಕೆಲವರು ಕೊಳವೆಬಾವಿ ಕೊರೆಯಲು ಮುಂದಾದಾಗ ಊರವರೆಲ್ಲ ಒಟ್ಟಾಗಿ ತಡೆಯೊಡ್ಡಿದ ನಿದರ್ಶನಗಳೂ ಇವೆ. ನೆಲ, ಜಲ ಸಂರಕ್ಷಣೆ, ಕಿರುತೊರೆಗೆ, ಹೊಳೆಗೆ ತಡೆಗಟ್ಟಗಳ ರಚನೆ, ಮಳೆ ನೀರ ಕೃತಕ ಇಂಗಿಸುವಿಕೆಯ ಮಹತ್ವ ಎಲ್ಲರ ಅರಿವಿಗೆ ಬಂದಿದ್ದರ ಪರಿಣಾಮವಿದು.